# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

# Akkamahadevi Women's University, Vijayapura

ಕುಲಸಚಿವರು (ಮೌಲ್ಯಮಾಪನ) | Registrar (Evaluation)

ವಿಜಯಪುರ-586108 | Vijayapura-586108

Phone Number: 08352-229123 | Fax Number 08352-229023


ಕ್ರ.ಸ :ಕರಾಮವಿವಿ/ಪರೀಕ್ಷಾ/ಮೌ.ಮಾ/2017-18/ ದಿನಾಂಕ: -12-2017

## ಸುತ್ತೋಲೆ

ಡಿಸೆಂಬರ್ – 2017 ರಲ್ಲಿ ಜರುಗಿದ ಸ್ನಾತಕ ಪದವಿಯ ಮನೋವಿಜ್ಞಾನ/ಪಿ.ಡಿ.ಸಿ.ಎಸ್ ವಿಷಯದ ಮೌಲ್ಯಮಾಪಕರನ್ನು ನೇಮಿಸಿದ್ದು ದಿನಾಂಕ: 02.01.2018 ರಂದು ಬೆಳಿಗ್ಗೆ 10 ಗಂಟೆಗೆ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಜರುಗುವ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಲು ಈ ಸುತ್ತೋಲೆಯ ಮೂಲಕ ತಿಳಿಸಲಾಗಿದೆ.

ಪ್ರೊ.ಎಚ್.ಕೆ.ಯಡಹಳ್ಳಿ, ಸಿಕ್ಯಾಬ ಮಹಿಳಾ ಕಾಲೇಜು, ವಿಜಯಪುರ ಇವರನ್ನು ಮನೋವಿಜ್ಞಾನ / ಪಿ.ಡಿ.ಸಿ.ಎಸ್ ವಿಷಯದ ಮೌಲ್ಯಮಾಪನ ಕಾರ್ಯದ ಚೇರಮನ್ನರಾಗಿ ನೇಮಕ ಮಾಡಿದ್ದು ಹೆಚ್ಚಿನ ಮಾಹಿತಿಗಾಗಿ ಮೌಲ್ಯಮಾಪಕರು ಇವರನ್ನು ಸಂಪರ್ಕಿಸಬಹುದಾಗಿದೆ.

**ಸೂಚನೆಗಳು:**

1. ಈ ಯಾದಿಯಲ್ಲಿ ಅನುದಾನ ರಹಿತ ಹಾಗೂ ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಅಥವಾ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಹೆಸರುಗಳು ಇರದಿದ್ದಲ್ಲಿ ಮೌಲ್ಯಮಾಪನ ಕಾರ್ಯಕ್ಕೆ ನೇರವಾಗಿ ಹಾಜರಾಗಬಾರದು. ಅವಶ್ಯಕತೆ ಇದ್ದಲ್ಲಿ ತಿಳಿಸಲಾಗುವುದು.
2. ಯಾದಿಯಲ್ಲಿರುವ ಮೌಲ್ಯಮಾಪಕರುಗಳಿಗೆ ಮೌಲ್ಯಮಾಪನ ನೇಮಕಾತಿ ಆದೇಶ ಪತ್ರವನ್ನು ನೇರವಾಗಿ ಪರೀಕ್ಷಾ ವಿಭಾಗದಲ್ಲಿ ನೀಡಲಾಗುವುದು.
3. ಈಗಾಗಲೇ ಬಾಹ್ಯ ಪರೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ಬಿಡುಗಡೆ ಪತ್ರ ತರಬೇಕು. ಹಾಗೂ ಬಿಡುಗಡೆಗೊಳಿಸಿದ ಪ್ರಾಚಾರ್ಯರು ನೇರವಾಗಿ ಕುಲಸಚಿವರು (ಮೌ) ಕಾರ್ಯಾಲಯಕ್ಕೆ ಬಿಡುಗಡೆ ಪತ್ರದ ಪ್ರತಿ ಕಳುಹಿಸಿಕೊಡಬೇಕು.
4. ತಾವು ಕಾರ್ಯ ನಿರ್ವಹಿಸುತ್ತಿರುವ ಮಾತೃ ಸಂಸ್ಥೆಯ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕೃತ ಗುರುತಿನ ಪತ್ರ, ಸೇವಾ ಪ್ರಮಾಣ ಪತ್ರ ಹಾಗೂ ಯು.ಜಿ.ಸಿ/ನಾನ್ ಯು.ಜಿ.ಸಿ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸುವುದು.
5. ಒಂದು ವೇಳೆ ಅರೇಕಾಲಿಕ/ ಅತಿಥಿ ಉಪನ್ಯಾಸಕರನ್ನು ಮೌಲ್ಯಮಾಪನ ಕಾರ್ಯಕ್ಕೆ ಕರೆದಲ್ಲಿ ತಪ್ಪದೇ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕೃತ ಸೇವಾ ಪ್ರಮಾಣ ಪತ್ರವನ್ನು ತರಬೇಕು.
6. ಮೌಲ್ಯಮಾಪನ ಕಾರ್ಯಕ್ಕೆ ಕನಿಷ್ಠ 03 ವರ್ಷಗಳ ಬೋಧನಾ ಅನುಭವ ಇರಬೇಕು. ಸತತವಾಗಿ 03 ವರ್ಷ ಹಾಗೂ ಅದಕ್ಕಿಂತ ಹೆಚ್ಚು ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿಯೇ ಸೇವೆ ಸಲ್ಲಿಸಿದವರು ಮಾತ್ರ ಮೌಲ್ಯಮಾಪನ ಕಾರ್ಯಕ್ಕೆ ಅರ್ಹರು.
7. ಮೌಲ್ಯಮಾಪನ ಕಾರ್ಯಕ್ಕೆ ಒಮ್ಮೆ ಹಾಜರಾಗಿ ಮಧ್ಯದಲ್ಲಿಯೇ ಮೌಲ್ಯಮಾಪನ ಕಾರ್ಯ ಬಿಟ್ಟು ಹೋದರೆ ಯಾವುದೇ ರೀತಿಯ ಸಂಭಾವನೆ ನೀಡುವುದಿಲ್ಲ.

8. ಮೌಲ್ಯಮಾಪನದ ಸಂಭಾವನೆ, ಸಾರಿಗೆ ಭತ್ಯೆ ಹಾಗೂ ದಿನಭತ್ಯೆಯನ್ನು ನೆಫ್ಟ್ ಮುಖಾಂತರ ನೀಡಲಾಗುವುದು. ಕಾರಣ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗುವಾಗ ಮೌಲ್ಯಮಾಪಕರು ಬ್ಯಾಂಕ್ ಅಕೌಂಟ್ ನಂಬರ, ಆಯ್.ಎಫ್.ಎಸ್.ಸಿ. ಕೋಡ್, ಬ್ಯಾಂಕ್ ಹೆಸರು ಇತರ ಮಾಹಿತಿಯನ್ನು ಹಾಗೂ 02 ಪಾಸ್‌ಪೋರ್ಟ್ ಸೈಜ್ ಫೋಟೊ ತರಬೇಕು.
9. ಮೌಲ್ಯಮಾಪನ ಕಾರ್ಯವು ಅತೃಪ್ತಿಯಾಗಿ ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಸಂಭಾವನೆ ನೀಡದೆ ಮೌಲ್ಯಮಾಪನ ಕಾರ್ಯದಿಂದ ಮೌಲ್ಯಮಾಪಕರನ್ನು ಬಿಡುಗಡೆಗೊಳಿಸಲಾಗುವುದು.
10. ಯಾದಿಯಲ್ಲಿರುವ ಮೌಲ್ಯಮಾಪಕರು ನಿವೃತ್ತಿ ಹೊಂದಿದ್ದಲ್ಲಿ ಅಥವಾ ಬೇರೆ ಸಂಸ್ಥೆಗೆ/ಕಾಲೇಜಿಗೆ ವರ್ಗಾವಣೆಗೊಂಡಿದ್ದಲ್ಲಿ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಬಾರದು.
11. ಯಾದಿಯಲ್ಲಿ ಸೂಚಿಸಿದ ಸರಕಾರಿ/ ಅನುದಾನಿತ ಕಾಲೇಜುಗಳ ಪ್ರಾಧ್ಯಾಪಕರುಗಳು ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ಹಾಜರಾಗದಿದ್ದಲ್ಲಿ ಮೇಲಾಧಿಕಾರಿಗಳಾದ ನಿರ್ದೇಶಕರು/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ ಇವರ ಗಮನಕ್ಕೆ ತರಲಾಗುವುದು.
12. ಸರಕಾರಿ ಅಥವಾ ಅನುದಾನಿತ ಮಹಾವಿದ್ಯಾಲಯಗಳಲ್ಲಿ ಖಾಯಂ ಆಗಿ ನೇಮಕಾತಿ ಹೊಂದಿ ಯು.ಜಿ.ಸಿ ಅಥವಾ ಸರ್ಕಾರಿ ವೇತನವನ್ನು ಪಡೆಯುತ್ತಿರುವ ಸಹ ಅಥವಾ ಸಹಾಯಕ ಪ್ರಾಧ್ಯಾಪಕರುಗಳ ಹೆಸರುಗಳು ಬಿಟ್ಟು ಹೋದಲ್ಲಿ ನೇರವಾಗಿ ಕುಲಸಚಿವರು (ಮೌಲ್ಯಮಾಪನ) ಇವರನ್ನು ಸಂಪರ್ಕಿಸಬಹುದು.
13. ಮೌಲ್ಯಮಾಪಕರು 80 ಅಂಕಗಳು ಇರುವ ಉತ್ತರ ಪತ್ರಿಕೆಗಳನ್ನು ದಿನಕ್ಕೆ 40 ರಂತೆ ಮೌಲ್ಯಮಾಪನ ಮಾಡುವುದು ಕಡ್ಡಾಯ.

## Psychology/PDCS Valuator List

| Sl no | Valuator List | Name of the College |
|---|---|---|
| 01 | Smt.Vishalakshi.Honnakatti | G.F.G W C Bailahongal |
| 02 | Dr.Mallikarjun.Krishnakar | Smt.V.G.W C Kalaburgi |

1-1-18

ಕುಲಸಚಿವರು(ಮೌಲ್ಯಮಾಪನ)
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

01/01/18